ಶ್ರೀ ಅಜೀಜ್‌ಸೇಠ್.—ಆ ಲಿಸ್ಟ್ ನನ್ನ ಹತ್ತಿರ ಇಲ್ಲ. ಡಿ. ಸಿ. ಅವರು ಅದರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಮತ್ತೆ ಕೋರ್ಟ್ ಸಹ ಆ ಜಮೀನನ್ನು ಯಾರಿಗೂ ಕೊಡಬಾರದೆಂದು ಹೇಳಿರುವುದರಿಂದ. ಈ ಮಧ್ಯದಲ್ಲಿ ಧಾರವಾಡ ಜಿಲ್ಲಾಪರಿಷತ್ತಿನವರು they are requesting the Deputy Commissioner to transfer these lands in favour of them for the said purpose. The Deputy Commissioner is yet to take a decision in the matter in view of the High Court. The matter is still pending.

ಶ್ರೀ ಕೆ. ಹೆಚ್. ಪಾಟೀಲ್.—ಆ ೨೯ ಜನರ ಹೆಸರುಗಳು ತಮ್ಮ ಬಳಿ ಇಲ್ಲವೆಂದು ಹೇಳಿದಿರಿ. ಆ ಎ. ಸಿ. ಅವರು ತಡೆಯಾಜ್ಞೆ ನೀಡಿ ತಹಸೀಲ್ದಾರ್‌ರವರ ಕ್ರಮವನ್ನು ನಿಷೇಧಿಸಿದ್ದಾರಲ್ಲ, ಅದರ ಬಗ್ಗೆ ಏನಾದರೂ ಡಿಪಾರ್ಟ್‌ಮೆಂಟಲ್ ಎನ್‌ಕ್ವಿಯರಿ ಮಾಡಿಸುತ್ತೀರಾ ?

ಶ್ರೀ ಅಜೀಜ್ ಸೇಠ್,—ಅದನ್ನು ನೋಡಬೇಕಾಗುತ್ತದೆ. ಅವರು ಹೇಳಿರುವುದರಿಂದ ವಿಚಾರಿಸುತ್ತೇನೆ.

ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡಿದ ಸಬ್ಸಿಡಿ ಹಣ

೨೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ೧೯೮೭-೮೮, ೧೯೮೮-೮೯ ಹಾಗೂ ೧೯೮೯-೯೦ರಲ್ಲಿ ಸಹಾಯ ಧನ ನೀಡಿದ ಹಣವೆಷ್ಟು ?

ಆ) ಹಾಗಿದ್ದಲ್ಲಿ ಇನ್ನೂ ಸಹಾಯ ಧನ ನೀಡಬೇಕಾಗಿರುವ ಮೊತ್ತವೆಷ್ಟು ?

ಶ್ರೀ ಎಂ. ವೀರಪ್ಪ ಮೊಯ್ಲಿ (ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಿಗಳು).—

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಈ ಕೆಳಕಂಡಂತೆ ಸಹಾಯ ಧನವನ್ನು ವಿತರಿಸಲಾಗಿದೆ. (State Subsiby)

೧೯೮೭-೮೮ ರೂ. ೧೩೦.೦೨ ಲಕ್ಷಗಳು
೧೯೮೮-೮೯ ರೂ. ೨೨೪.೦೦ ,,
೧೯೮೯-೯೦ ರೂ. ೩೦೦.೦೦ ,,

ಆ) ದಿನಾಂಕ ೩೧-೩-೧೯೯೦ರವರೆಗೆ ಸಹಾಯ ಧನ ರೂಪದಲ್ಲಿ ರೂ. ೧ ೧೧೫.೦೦ ಲಕ್ಷ ರೂಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ರಾಜ್ಯ ಸರ್ಕಾರ ತಾನು ಸಣ್ಣ ಕೈಗಾರಿಕೆಗಳಿಗೆ ಕೊಡುವಂಥಾ ಸಬ್ಸಿಡಿ ಹಣದ ಬಾಕಿ ೩೧-೩-೯೦ಕ್ಕೆ ೧,೧೧೫ ಲಕ್ಷ ಎಂದು ಹೇಳಿದೆ. ಈ ಹಣ ಯಾವ್ಯಾವ ವರ್ಷದಿಂದ ಬಾಕಿ ಇದೆ, ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ಕೊಡಬೇಕಾಗಿದೆ ಯಾವಾಗ ಬಾಕಿ ಇರುವುದನ್ನು ಕೊಡಬೇಕೆಂದು ನಿಶ್ಚಯ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇದು ಆಯಾಯ ವರ್ಷ ನಮ್ಮ ಆಯವ್ಯಯದಲ್ಲಿ ಸಂಯೋಜಿಸಿ ಕೊಡಬೇಕಾದಂಥ ಬಾಕಿ ಅದನ್ನು ಕೇಳಿಟ್ಟಿಲ್ಲ. ತಮಗೆ ಗೊತ್ತಿರುವ ಪ್ರಕಾರ ಒಟ್ಟು ಸಣ್ಣ ಕೈಗಾರಿಕೆಗಳು, ದೊಡ್ಡ ಕೈಗಾರಿಕೆಗಳು ಎಲ್ಲಾ ಸೇರಿ ಬಾಕಿ ಇರತಕ್ಕಂಥದ್ದು ಸಬ್ಸಿಡಿಯನ್ನು ಕೊಡತಕ್ಕಂಥದ್ದು ೨೦ ಕೋಟಿ ರೂಪಾಯಿ ಇದೆ. ಡೆವಲಪ್‌ಮೆಂಟ್ ಲೋನ್ ೧೬.೫೫ ಕೋಟಿ ರೂಪಾಯಿ ಇದೆ. ನಾನು ಇಲ್ಲಿ ಹಿಂದಿನ ಸರ್ಕಾರದವರನ್ನು ದೂರಲಿಕ್ಕೆ ನಿಂತಿಲ್ಲ. ಆದರೂ ಇದು ಹಿಂದಿನ ಸರ್ಕಾರದ ಬಳುವಳಿ. ಅದು ನಮ್ಮ ತಲೆಯಮೇಲೆ ಬಿಟ್ಟಿದೆ. ಇದನ್ನು ಆದಷ್ಟೂ ಜಾಗ್ರತೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಏಕೆಂದರೆ ಕೈಗಾರಿಕೆಗಳನ್ನು ಹೆಚ್ಚು ಮಾಡಬೇಕು ಎಂದು ಹೇಳಿ ಜನರನ್ನು ಆಕರ್ಷಣೆ ಮಾಡಿದ್ದೇವೆ ಅಥವಾ ಮುಖ್ಯವಾಗಿ ಸಣ್ಣ ಉದ್ದಿಮೆದಾರರನ್ನು ಕರೆಯುತ್ತಿದ್ದೇವೆ. ನಮ್ಮನ್ನು ನಂಬಿ ಅವರು ಕೈಗಾರಿಕೆಯನ್ನು ಪ್ರಾರಂಭ ಮಾಡಿರುತ್ತಾರೆ. ಆದಷ್ಟು ಜಾಗ್ರತೆ ಅವರ ಸಹಾಯಕ್ಕೆ ಬರಬೇಕು ಎನ್ನುವ ಉದ್ದೇಶ ನಮ್ಮ ಸರ್ಕಾರಕ್ಕೆ ಇದೆ. ಆದಷ್ಟು ಜಾಗ್ರತೆ ಅವರಿಗೆ ಇದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸುಮಾರು ನಾಲ್ಕೈದು ವರ್ಷಗಳಿಂದ ಇದು ಉಳಿದಂಥ ಬಾಕಿ ಹಣ. ಇದರ ಮೊತ್ತ ಎಷ್ಟು ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸಾಕಷ್ಟು ಅನುಭವ ಇರತಕ್ಕಂಥ ಸನ್ಮಾನ್ಯ ಸಚಿವರಿಗೆ ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾದಂಥ ಅಗತ್ಯವಿಲ್ಲ. ಈ ರೀತಿ ಡೆವಲಪ್‌ಮೆಂಟ್ ಲೋನ್ ಮತ್ತೆ ಸಬ್ಸಿಡಿ ಹಣ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೊಡದೇ ಇರತಕ್ಕಂಥದ್ದು ಸಹಜವಾಗಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಧಕ್ಕೆಯಾಗುತ್ತದೆ. ಅವರು ಈಗಾಗಲೇ ಸಾಲಸೋಲ ಮಾಡಿಕೊಂಡಿದ್ದಾರೆ. ಅವರು ಲಾಕ್ಸನ್‌ನಲ್ಲಿ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಇದರ ಪರಿಣಾಮ ಮುಂದೆ ಏನಾಗುತ್ತದೆ ಎಂದರೆ ಯಾರೂ ಸಹಾ ಈ ರೀತಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬರದೇ ಇರತಕ್ಕಂಥ ಪರಿಸ್ಥಿತಿ ಒದಗಿ ಬಂದಿದೆ. ಇದು ಹಿಂದಿನ ಸರ್ಕಾರದ ಬಳುವಳಿ ಇರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ತಾವು ಇದರ ಬಗ್ಗೆ ಏನಾದರೂ ಇಷ್ಟರ ಒಳಗಾಗಿ ಈ ಹಣವನ್ನು ಪಾವತಿ ಮಾಡಲು ಆದ್ಯತೆಯ ಮೇಲೆ ಈ ಹಣವನ್ನು ತುಂಬತಕ್ಕಂಥ ಒಂದು ಪ್ರಯತ್ನವನ್ನು ತಾವು ಮಾಡುತ್ತೀರಾ ? ಇಲ್ಲದಿದ್ದರೆ ಮುಂದೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಧಕ್ಕೆಯಾಗುವುದಿಲ್ಲವೇ ? ನನಗೆ ಗೊತ್ತಿರುವ ಪ್ರಕಾರ ಕೇಂದ್ರ ಸರ್ಕಾರದವರು ತಮ್ಮ ಭಾಗದ ಡೆವಲಪ್‌ಮೆಂಟ್ ಲೋನ್ ಮತ್ತು ಸಬ್ಸಿಡಿಯನ್ನು ಪೂರ್ಣವಾಗಿ ಕೊಟ್ಟಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಈ ಬಗ್ಗೆ ಏನಾದರೂ ಮಾಹಿತಿ ಇದೆಯೇ ? ಅವರು ಇನ್ನೂ ಕೊಡಬೇಕಾಗಿದ್ದರೆ ಎಷ್ಟು ಕೊಡಬೇಕು ? ಯಾವಾಗ ಕೊಡುತ್ತಾರೆ ? ಮತ್ತು ಇನ್ನಾದರೂ ಆದ್ಯತೆಯ ಮೇಲೆ ಇದಕ್ಕೆ ಗಮನವನ್ನು ಕೊಟ್ಟು ಹಣವನ್ನು ತುಂಬಲಿಕ್ಕೆ ನಿರ್ದಿಷ್ಟವಾಗಿ ಏನಾದರೂ ಪ್ರಯತ್ನವನ್ನು ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶಾಸಕರಾದಂಥ ಯಡಿಯೂರಪ್ಪನವರು ಹೇಳಿದ ಪ್ರಕಾರ ನಾವು ಏನೇನು ಆಶ್ವಾಸನೆಗಳನ್ನು ಕೊಡುತ್ತೇವೆ. ಅಥವಾ ಏನಂ ಪ್ರೋತ್ಸಾಹ ಧನದ ರೂಪದಲ್ಲಿ ಅಥವಾ ಬೇರೆ ಬೇರೆ ಅನುಕೂಲತೆಯ ದೃಷ್ಟಿಯಲ್ಲಿ ಹೇಳುತ್ತೇವೆಯೋ ಅದನ್ನು ನೆರವೇರಿಸಬೇಕಾದ್ದು ಸರ್ಕಾರದ ಆದ್ಯಕರ್ತವ್ಯವಾಗಿದೆ. ಆದರೆ ದುರಾದೃಷ್ಟವಶಾತ್ ಇದಕ್ಕೆ ಕಾರಣ ಆಲ್ಲವೆಂಬುದು ತಮಗೇ ಗೊತ್ತಿರಬಹುದು. ಈಗ ಕೈಗಾರಿಕೆಯಲ್ಲಿ ಸಣ್ಣ ಕೈಗಾರಿಕೆ ಕೊಡಾ ಸೇರಿದೆ. ನಮ್ಮ ಕೈಗಾರಿಕಾ ಬೆಳವಣಿಗೆಯಲ್ಲಿ ಸ್ವಲ್ಪ ಇಳಿಮುಖವಾಗಿದೆ. ಇದನ್ನು ತಡೆಹಿಡಿದು ನಿಲ್ಲಿಸಿ ಒಂದು ಒಳ್ಳೆಯ ವಾತಾವರಣವನ್ನು ಸಣ್ಣ ಕೈಗಾರಿಕೆಯ ಅಭಿವೃದ್ಧಿಗೆ ಅಥವಾ ದೊಡ್ಡ ಕೈಗಾರಿಕೆಯ ಅಭಿವೃದ್ಧಿಗೆ ನಿರ್ಮಾಣ ಮಾಡುವಂಥಾ ಅವಶ್ಯಕತೆ ಇದೆ. ತಾವು ಹೇಳಿದ ಪ್ರಕಾರ ಇಂತಿಷ್ಟೇ ದಿವಸದಲ್ಲಿಯೇ ಎಲ್ಲಾ ಹಣವನ್ನು ಕೊಡುತ್ತೇವೆ ಎಂದು ಹೇಳಿ ಐದು ವರ್ಷದ ಬಾಕಿಯನ್ನು ಬೇರೆ ಬಾಕಿಯನ್ನೆಲ್ಲಾ ನಿಲ್ಲಿಸಿ ಇದನ್ನೇ ಕೊಡುತ್ತೇವೆ ಎಂದು ತತ್‌ಕ್ಷಣ ಆಶ್ವಾಸನೆ ಕೊಡುವುದು ತಪ್ಪಾಗುತ್ತದೆ. ಆಶ್ವಾಸನೆಯನ್ನು ಕೊಟ್ಟಮೇಲೆ ತತ್‌ಕ್ಷಣ ಜಾರಿ ಮಾಡಬೇಕಾಗುತ್ತದೆ. ಒಂದು ವಿಷಯವನ್ನು ಈ ಸದನಕ್ಕೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಆದಷ್ಟು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಹಣಕಾಸಿನ ಸಚಿವರ ಜೊತೆಯಲ್ಲಿ ಕೂಡ ಮಾತನಾಡಿ ಆದಷ್ಟು ಮಟ್ಟಿಗೆ ಅಕ್ಯಮ್ಯುಲೇಟೆಡ್ ಅರಿಯರ್ಸ್ ಏನಂ ಇದೆ, ಅದನ್ನು ಒಂದೆರಡು ವರ್ಷಗಳಲ್ಲಿಯೇ ನಿವಾರಣೆ ಮಾಡಿಕೊಂಡು ಒಂದು ಹಂತಕ್ಕೆ ತರತಕ್ಕಂಥ ಪ್ರಯತ್ನವನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ಒರುವಂಥ ಎರಡು–ಮೂರು ತಿಂಗಳಲ್ಲಿ ತಕ್ಷಣ ಏನಾದರೂ ಹಣ ಬಿಡುಗಡೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೀರಾ ? ೫೦ ಲಕ್ಷ ೨೫ ಲಕ್ಷ ಈ ರೀತಿ ನಿರ್ದಿಷ್ಟವಾಗಿ ಬಿಡುಗಡೆ ಮಾಡುವ ವಿಚಾರ ತಮ್ಮ ಕಣ್ಣ ಮುಂದೆ ಏನಾದರೂ ಇದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ.—ಈ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆ

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.— ಅವರ ಇನ್ನೊಂದು ಪ್ರಶ್ನೆಗೆ ಉತ್ತರ ಬರಲಿಲ್ಲ. ಹಿಂದೆ ಕೇಂದ್ರ ಸರ್ಕಾರ ಕೆಲವು ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡಿದರೆ ಅದಕ್ಕೆ ಸಬ್ಸಿಡಿಯನ್ನು ಕೊಡುತ್ತೇವೆ ಎಂದು ಹೇಳಿ ಸಬ್ಸಿಡಿಯನ್ನು ಅವರು ಬಿಡುಗಡೆ ಮಾಡಿದ್ದಾರೆ. ಈಗ ಉದಾಹರಣೆಗಾಗಿ ಹೇಳುವುದಾದರೆ. ಬೀದರ್ ಜಿಲ್ಲೆಯಲ್ಲಿ ಕೆಲವು ಇಂಡಸ್ಟ್ರಿಗಳನ್ನು ಎಸ್ಟಾಬ್ಲಿಷ್ ಮಾಡಿದರು. ಆಂಥ ಇಂಡಸ್ಟ್ರಿಗಳಿಗೆ ಕೇಂದ್ರ ಸರ್ಕಾರದವರು ಸಬ್ಸಿಡಿಯನ್ನು ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ಅದನ್ನು ಬಿಡುಗಡೆ ಮಾಡಿಲ್ಲ. ಅಂಥ ಹಣ ಕೇಂದ್ರ ಸರ್ಕಾರದಿಂದ ನಿಮಗೆ ಎಷ್ಟು ಮುಟ್ಟಿದೆ? ನೀವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಬಾಕಿ ಕೊಡತಕ್ಕಂಥದ್ದು ಎಷ್ಟು ಇದೆ ಎನ್ನತಕ್ಕಂಥದ್ದನ್ನು ಹೇಳಬೇಕು. ಇದು ಒಂದು. ಎರಡನೆಯದಾಗಿ ಈ ವರ್ಷದ ಬಜೆಟ್‌ನಲ್ಲಿ ತಾವು ಈ ಒಂದು ಸಬ್ಸಿಡಿಯನ್ನು ಕೊಡುವುದಕ್ಕೆ ಯಾವ ರೀತಿಯಾದ ವ್ಯವಸ್ಥೆ ಮಾಡಿದ್ದೀರಿ, ಎಷ್ಟು ಹಣವನ್ನು ಇದಕ್ಕೆ ಇಟ್ಟಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಕೇಂದ್ರ ಸರ್ಕಾರ ತನ್ನ ಒಂದು ಕೈಗಾರಿಕಾ ನೀತಿಯಲ್ಲಿ ಕೇಂದ್ರದ ಸಬ್ಸಿಡಿಯನ್ನು ಬಿಡುಗಡೆ ಮಾಡಬೇಕು ಎಂದು ನಿಯಮ ಇದೆ. ೨೧ ಕೋಟಿ ರೂಪಾಯಿಗಳು ಈ ಬಾಬಿನಿಂದ ರಾಜ್ಯ ಸರ್ಕಾರಕ್ಕೆ ಬರಬೇಕು. ಈ ಹಣ ಬಂದ ಕೂಡಲೇ ಬಿಡುಗಡೆ ಮಾಡುತ್ತೇವೆ. ಆದರೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹಣ ಬಾರದೇ ನಾವು ಬಿಡುಗಡೆ ಮಾಡುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲ. ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆ. ಹಣ ಬಂದ ಕೂಡಲೇ ಈ ಉದ್ಯಮಗಳಿಗೆ ಇದನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ವಲ್ಲಿಕಾರ್ಜುನ ಎಂ. ಖರ್ಗೆ.— ಸಬ್ಸಿಡಿ ಬಂದಿದ್ದನ್ನು ಸರ್ಕಾರದವರು ಬೇರೆ ಕಾರಣಗಳಿಗಾಗಿ ಉಪಯೋಗ ಮಾಡಿಕೊಂಡಿದ್ದಾರೆ, ಇದನ್ನು ಆಯಾ ಇಂಡಸ್ಟ್ರಿಗಳಿಗೆ ಕೊಟ್ಟಿಲ್ಲ. ಇಂತಹ ಹಣ ಎಷ್ಟು ಎಂದು ಕೇಳುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಬರತಕ್ಕದ್ದರ ಬಗ್ಗೆ ನಾನು ಕೇಳಲಿಲ್ಲ. ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಹಣದಲ್ಲಿ ಬೇರೆ ಬಾಬ್ತಿಗಾಗಿ ಖರ್ಚು ಮಾಡಿರುವ ಹಣ ಎಷ್ಟು ಎಂದು ನಾನು ಕೇಳುತ್ತೇನೆ?

ಶ್ರೀ ಎಂ. ವೀರಪ್ಪ ಮೊಯಿಲಿ.— ಕೇಂದ್ರ ಸರ್ಕಾರದಿಂದ ಈಗಾಗಲೇ ಬಂದಿದ್ದಂತಹ ಹಣವನ್ನು ಬೇರೆ ಕಡೆ ಉಪಯೋಗ ಮಾಡಿದ್ದು ನನ್ನ ಗಮನದಲ್ಲಿ ಇಲ್ಲ. ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನನಗೆ ಗೊತ್ತಿರುವ ಹಾಗೆ ಸೆಂಟ್ರಲ್ ಸಬ್ಸಿಡಿ ಬಿಡುಗಡೆ ಮಾಡಿದ್ದನ್ನು ನಮ್ಮ ಕೈಯಲ್ಲಿಯೇ ಇಟ್ಟುಕೊಳ್ಳುವ ಪ್ರಸಂಗ ಇಲ್ಲ, ನನ್ನ ಈ ಕ್ಷಣದ ಅನುಭವದ ಪ್ರಕಾರವಾಗಿ ಹೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಸಬ್ಸಿಡಿ ಹಣ ಬಾಕಿ ಇರುವುದಕ್ಕೆ ಹಿಂದಿನ ಸರ್ಕಾರ ಕಾರಣ ಎಂದು ಹೇಳಿದ್ದಾರೆ. ೧೯೮೬ರಿಂದ ೧೯೯೦ರವರೆಗೆ ಸಬ್ಸಿಡಿ ಹಣವನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳಿಗೆ ಕೊಟ್ಟಿಲ್ಲ. ಈ ನಾಲ್ಕು ವರ್ಷಗಳಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಸಬ್ಸಿಡಿ ರೂಪದಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದೆ, ಆ ರೀತಿ ಬಿಡುಗಡೆ ಮಾಡಿದ ಹಣದ ಪೈಕಿ ರಾಜ್ಯ ಸರ್ಕಾರ ಎಷ್ಟು ಬಾಬುಗಳಿಗೆ ಉಪಯೋಗ ಮಾಡಿಕೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ ವೀರಪ್ಪಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಮಾನ್ಯ ಉಪ ನಾಯಕರು ನಾನು ಪ್ರಥಮ ಹಂತದ ಉತ್ತರ ಕೊಡುವಾಗ ಗಮನ ಇಟ್ಟು ಕೇಳಲಿಲ್ಲವೆಂದು ಕಾಣುತ್ತದೆ. ೧೯೮೬-೮೮ರಲ್ಲಿ ರಾಜ್ಯ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಿದ ಹಣ ೧೩೦ ೦೨ ಲಕ್ಷ ರೂಪಾಯಿಗಳು. ೧೯೮೮-೮೯ರಲ್ಲಿ ೨೨೪ ಲಕ್ಷ ರೂಪಾಯಿಗಳು. ೧೯೮೯-೯೦ರಲ್ಲಿ ೩೦೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಎಂದು ಹೇಳಿದ್ದೆ, ಅದನ್ನು ಮತ್ತೆ ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ೬ ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿಲ್ಲ. ಹಿಂದಿನ ಸರ್ಕಾರ ಒಹಳ ದೊಡ್ಡ ತಪ್ಪು ಮಾಡಿದೆ ಎಂದು ಹೇಳಿದಿರಿ. ಕೇಂದ್ರ ಸರ್ಕಾರದಿಂದ ಹಣ ಬಂದಿದೆ. ಆದರೂ ಈ ಬಾಕಿ ಹಿಂದಿನ ಸರ್ಕಾರದ ಬಳುವಳಿ ಎಂದು ಹೇಳಿ ಅದನ್ನು ಟೀಕೆ ಮಾಡುವುದಕ್ಕೆ ತಯಾರು ಇಲ್ಲ ಎಂದು ತಾವು ಹೇಳಿದಿರಿ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸಬ್ಸಿಡಿ ರೂಪದಲ್ಲಿ ಬರಬೇಕಾದ ಒಟ್ಟು ಮೊತ್ತ ಎಷ್ಟು? ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ.— ನಾನು ಈ ವಿಚಾರದ ಬಗ್ಗೆ ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಏನೆಂದರೆ ಕೇಂದ್ರ ಸರ್ಕಾರದಿಂದ ಬರಬೇಕಾದ್ದು ಶೇಕಡ ೧೧ ಕೋಟಿ ರೂಪಾಯಿ ಬಾಕಿ ಇದೆ ಎಂದು ಹಿಂದಿನ ಸರ್ಕಾರಕ್ಕೆ ಕೊಡಬೇಕಾದ್ದು ಇರಲಿ ಆಥವಾ ನಮ್ಮ ಸರ್ಕಾರಕ್ಕೆ ಕೊಡಬೇಕಾದ್ದು ಇರಲಿ, ಅದು ಹಾಗೆಯೇ ಉಳಿದಿದೆ. ರಾಜ್ಯ ಸರ್ಕಾರದ ಸಂಪನ್ಮೂಲಗಳಿಗೆ ಬರಬೇಕಾದ ಹಣ ಅದು. ಅದು ಒಂದು ಲೆಗೇಸಿ. I am not accusing.

SRI P. G. R. SINDHYA.— How much money Government has not paid. ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಹಣ ಕೇಂದ್ರ ಸರ್ಕಾರದವರು ಕೊಟ್ಟರು ಎಂಬುದನ್ನು ಹೇಳಲಿಲ್ಲ.

ಒಬ್ಬ ಮಾನ್ಯ ಸದಸ್ಯರು.— ಕೇಂದ್ರ ಸರ್ಕಾರದಿಂದ ಸಬ್ಸಿಡಿ ಬರುತ್ತಿರುವ ವಿಚಾರ ನಮಗೆ ಗೊತ್ತು. ಕೇಂದ್ರ ಸರ್ಕಾರದಿಂದ ಸಬ್ಸಿಡಿ ಡ್ರಾ ಮಾಡಿದ್ದರೂ ಸಹ ಆ ಹಣವನ್ನು ಇಂಡಸ್ಟ್ರಿಗಳಿಗೆ ಯಾಕೆ ಕೊಟ್ಟಿಲ್ಲ ಎಂಬುದನ್ನು ಮಾನ್ಯ ಸಚಿವರು ತಿಳಿಸಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇದಕ್ಕೆ ನಾನು ಉತ್ತರ ಹೇಳಿದ್ದೇನೆ. ನನ್ನ ಈ ಕ್ಷಣದ ಮಾತು ಎಂದರೆ ಡ್ರಾ ಮಾಡದೆ ಕೊಟ್ಟಿದ್ದು ಯಾವುದೂ ಇಲ್ಲ. ಹಾಗೂ ಡ್ರಾ ಮಾಡಿದ್ದರೂ ಕೊಡದೇ ಇರುವುದು ಯಾವುದೂ ಇಲ್ಲ. ಒಂದು ವೇಳೆ ಡ್ರಾ ಮಾಡಿಯೂ ಹಣ ಕೊಡದಿದ್ದ ಪಕ್ಷದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇನೆ.

ಶಹಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ

೧೬೧. ಶಿವಶೇಖರಗೌಡ ಶಿರವಾಳ (ಶಹಾಪುರ).— ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಗುಲ್ಬರ್ಗಾ ಜಿಲ್ಲೆಯ ಶಹಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

೨) ೧.೨೬ ಕೋಟಿ ರೂಪಾಯಿಗಳ ವೆಚ್ಚದ ಕುಡಿಯುವ ನೀರಿನ ಸರಬರಾಜು ಯೋಜನೆ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವೇ?

೩) ಹಾಗಿದ್ದಲ್ಲಿ ಶಹಾಪುರ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸಲು ಈ ಯೋಜನೆಗೆ ಮಂಜೂರಾತಿ ಕೊಟ್ಟು ಕೆಲಸವನ್ನು ಪ್ರಾರಂಭಿಸಲಾಗುವುದೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಬಂದಿದೆ.

೨) ನಿಜ. ರೂ. ೧.೨೬ ಕೋಟಿ ರೂಪಾಯಿಗಳ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ತಯಾರಿಸಿ ಪುರಸಭೆ, ಶಹಾಪುರ ಇವರಿಗೆ ಮೇಲುರುಜು ಹಾಗೂ ಶರಾಪನ್ನು ಸಲ್ಲಿಸಲು ಕಳುಹಿಸಲಾಗಿದೆ.

೩) ಮೇಲಿನ ಮಾಹಿತಿ ಬಂದ ಕೂಡಲೇ ಹಣದ ವ್ಯವಸ್ಥೆ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಶಿವಶೇಖರ ಗೌಡ ಶಿರವಾಳ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಎರಡನೇ ಪ್ರಶ್ನೆಗೆ ಉತ್ತರವಾಗಿ ೧.೨೬ ಕೋಟಿ ರೂಪಾಯಿಗಳ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ತಯಾರಿಸಿ ಪುರಸಭೆ, ಶಹಾಪುರ ಇವರಿಗೆ..... ಕಳಿಸಲಾಗಿದೆ ಎಂದು ಹೇಳಿದ್ದಾರೆ. ನನಗೆ ತಿಳಿದ ಪ್ರಕಾರ ಶಹಾಪುರ ಪುರಸಭೆಯವರು ಅನುಮತಿಗಾಗಿ ಕಳಿಸಿಕೊಟ್ಟಿದ್ದಾರೆ. ನಮ್ಮಲ್ಲಿ ಕುಡಿಯುವ ನೀರಿನ ಬರದಿಂದ ಶಾಶ್ವತವಾಗಿ ತೊಂದರೆಯಾದ ಕಾರಣ ಕಳೆದ ೩-೪ ವರ್ಷಗಳಿಂದ ಈ ಯೋಜನೆಯನ್ನು ಬಡ್ಜೆಟ್‌ನಲ್ಲಿ ಸೇರಿಸಿ ತೆಗೆದುಕೊಳ್ಳಬೇಕು, ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳುತ್ತಾ ಇದ್ದೇನೆ. ಆದ್ದರಿಂದ ಈ ವರ್ಷ ಈ ಕಾರ್ಯವನ್ನು ಪ್ರಾರಂಭ ಮಾಡಬೇಕು ಎಂದು ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರ ಅರ್ಥಮಾಡಿಕೊಂಡಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಆದ್ಯತೆ ಮೇರೆಗೆ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆ ಕೊಡುತ್ತಿದ್ದೇನೆ.

ಶ್ರೀ ಶಿವಶೇಖರಗೌಡ ಶಿರವಾಳ.—ಈ ವರ್ಷ ಪ್ರಾರಂಭ ಮಾಡುತ್ತೀರಾ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—೧೯೯೦-೯೧ರ ಆರ್ಥಿಕ ವರ್ಷದಲ್ಲಿ ಪರಿಶೀಲಿಸಲಾಗುವುದು.

ಬನಶಂಕರಿ ೩ನೇ ಮತ್ತು ೪ನೇ ಫೇಸ್ ಮತ್ತು ೭ನೇ ಬ್ಲಾಕ್‌ನಲ್ಲಿ ರಚಿಸಲಾದ ಸೈಟುಗಳ ಬಗ್ಗೆ

ಶ್ರೀ ಬಿ. ರಾಮನಾಥ ರೈ.—ಮಾನ್ಯ ಅಧ್ಯಕ್ಷರೆ, ೧೮ (೪೬)ರ ಪ್ರಶ್ನೆಯನ್ನು ನಾನು ಕೇಳಲೇ ಇಲ್ಲ, ಈ ಪ್ರಶ್ನೆ ಹೇಗೆ ಬಂತು ಎಂದು ಗೊತ್ತಾಗಲಿಲ್ಲ.